# ಹಾವುಗಳು

ಹಾವು ಕಡಿತಕ್ಕೆ ಒಳಗಾದರೆ ಶಾಂತವಾಗಿರಿ ಮತ್ತು ಕಚ್ಚಿದ ದೇಹದ ಭಾಗವನ್ನು ನಿಷ್ಕ್ರಿಯಗೊಳಿಸಿ ಆದಷ್ಟು ಬೇಗ ಹಾವಿನ ಕಡಿತಕ್ಕೆ ಉಪಯೋಗಿಸುವ ಔಷಧಿಯಿರುವ ಆಸ್ಪತ್ರೆಗಳಿಗೆ ದಾಖಲಾಗಿ

**ಆವಾಸಸ್ಥಾನ**

ತೆರೆದ, ಹುಲ್ಲು ಮತ್ತು ಪೊದೆ ಪ್ರದೇಶ, ಕೃಷಿಭೂಮಿ, ಮರದ ಪೊಳ್ಳು, ಕಾಡು ಮತ್ತು ನಗರಗಳನ್ನು ಒಳಗೊಂಡಂತೆ ಮಾನವ ವಸತಿ ಪ್ರದೇಶ

**ಜಾತಿಯ ಶ್ರೀಮಂತಿಕೆ**

ಭಾರತದಲ್ಲಿ ಸುಮಾರು 300 ಜಾತಿಯ ಹಾವುಗಳು ಕಂಡುಬರುತ್ತವೆ. ಭಾರತದಲ್ಲಿ ಹಾವುಗಳನ್ನು ಕಾನೂನುಬದ್ಧವಾಗಿ ರಕ್ಷಿಸಲಾಗಿದೆ

**ದೊಡ್ಡ 4**

ಹೆಚ್ಚಿನ ಹಾವುಗಳು ನಿರುಪದ್ರವಿ. ಕೇವಲ ನಾಲ್ಕು ಪ್ರಭೇದದ ಹಾವುಗಳು ಹೆಚ್ಚಿನ ಮರಣಕ್ಕೆ ಕಾರಣವಾಗಿವೆ

## ನಾಗರ ಹಾವು

ನಾಜ ನಾಜಾ
ನರ ವಿಷಕಾರಿ



ದೇಹದ ಬಣ್ಣವು ಗಾಢ ಕಂದು ಬಣ್ಣದಿಂದ ಕಪ್ಪು ಬಣ್ಣಕ್ಕೆ ಬದಲಾಗುವ ದೊಡ್ಡ ಗಾತ್ರದ ಹಾವು. ಎಚ್ಚರಿಕೆ ನೀಡುವಾಗ, ಹಾವು ತನ್ನ ತಲೆಯನ್ನು ಮೇಲಕ್ಕೆತ್ತಿ ರಕ್ಷಣೆಗಾಗಿ ತನ್ನ ಹೆಡೆಯನ್ನು ಹರಡುತ್ತದೆ. ದೇಹದ ಕೆಳಗಿನ ಭಾಗದ ಹುರುಪುಗಳು ನಯವಾದ ಮತ್ತು ಅಂಡಾಕಾರದ ಆಕಾರದಲ್ಲಿರುತ್ತವೆ. ಹುಡ್ ಗುರುತುಗಳು ಪ್ರತ್ಯೇಕವಾಗಿ ಸ್ಪಷ್ಟವಾದ ಕನ್ನಡಕ ಚಿಹ್ನೆಯಿಂದ ಹುಡ್ ಗುರುತುಗಳಿಲ್ಲದವರೆಗೆ ಬದಲಾಗುತ್ತವೆ

- ಸಂಜೆಯಲ್ಲಿ ಅತೀ ಹೆಚ್ಚು ಸಕ್ರಿಯವಾಗಿರುತ್ತದೆ
- ಸಾಮಾನ್ಯವಾಗಿ ಕೃಷಿ ಭೂಮಿಗಳಲ್ಲಿ ಮತ್ತು ಬಲಿ ಪ್ರಾಣಿಗಳಿಗಾಗಿ ಅಥವಾ ಆಶ್ರಯಕ್ಕಾಗಿ ಮನೆಗೆ ಬರುತ್ತದೆ
- ನಾಗರ ಹಾವು ಬುಸುಗುಡುವುದು ಮತ್ತು ಹೆಡೆಯನ್ನು ಬಿಚ್ಚುವುದು ರಕ್ಷಣಾತ್ಮಕ ಮತ್ತು ಎಚ್ಚರಿಕೆ ಸೂಚನೆಗಳು
- ಕಡಿತಕ್ಕೆ ಒಳಗಾದರೆ ಹೆಚ್ಚು ನೋವಿನಿಂದ ಮತ್ತು ಊತದಿಂದ ಮತ್ತು ಕಚ್ಚಿದ ಭಾಗದಿಂದ ರಕ್ತ ಸುರಿಯುವುದು, ಹಾಗೂ ಉಸಿರಾಟಕ್ಕೆ ತೊಂದರೆ, ಮಂದ ದೃಷ್ಟಿಯಾಗುವುದು
- ವಿಷವು ಪಾರ್ಶ್ವವಾಯು, ಉಸಿರಾಟ ಮತ್ತು ಹೃದಯ ವೈಫಲ್ಯಕ್ಕೆ ಕಾರಣವಾಗಬಹುದು

ಹೆಚ್ಚಿನ ಹಾವು ಕಡಿತಗಳು ಮಳೆಗಾಲದ ಸಮಯದಲ್ಲಿ ಸಂಭವಿಸುತ್ತವೆ, ಹಾವುಗಳು ಪ್ರವಾಹದ ಸಮಯದಲ್ಲಿ ತಮ್ಮ ಬಿಲಗಳಿಂದ ಹೆಚ್ಚಾಗಿ ಮನೆಗಳು ಮತ್ತು ಕೃಷಿ ಕ್ಷೇತ್ರಗಳಿಗೆ ಹೆಚ್ಚಾಗಿ ಬರುತ್ತವೆ

## ಕಟ್ಟಾವು

ಬುಂಗರುಸ್ ಸೇರುಲಿಯಸ್
ನರ ವಿಷಕಾರಿ

ತೆಳ್ಳಗಿನ ಕಪ್ಪು ಅಥವಾ ನೀಲಿ ಕಪ್ಪು ದೇಹವನ್ನು ಹೊಂದಿರುವ ಮಧ್ಯಮ ಗಾತ್ರದ ಹಾವು ದೇಹದ ಮೇಲೆ ಕ್ಷೀರ-ಬಿಳಿ ಪಟ್ಟಿಗಳು (ಸಾಮಾನ್ಯವಾಗಿ ಜೋಡಿಯಾಗಿ) ಕಾಣುತ್ತದೆ. ದೇಹದ ಮುಂಭಾಗದಲ್ಲಿ ಬ್ಯಾಂಡ್‌ಗಳು ಇಲ್ಲದಿರಬಹುದು. ಕಶೇರುಖಂಡಗಳ ಪ್ರದೇಶದಲ್ಲಿ ಷಡ್ಭುಜಾಕೃತಿಯ ಹುರುಪುಗಳು ಮತ್ತು ಅದು ನಯವಾಗಿರುತ್ತವೆ.



- ರಾತ್ರಿಯಲ್ಲಿ ಸಕ್ರಿಯವಾಗಿರುತ್ತದೆ
- ಕಲ್ಲು ಬಂಡೆಗಳಿರುವ ಕಡೆ ಮತ್ತು ಎಲೆಗಳ ರಾಶಿ, ಹುತ್ತದಲ್ಲಿ, ಇಲಿಗಳ ಬಿಲದಲ್ಲಿ, ಮತ್ತು ಕೆಲವೆಡೆ ಗೋಡೆಗಳ ಸಂದುಗಳಲ್ಲಿ ಇರುತ್ತವೆ
- ಬೆಳಗಿನ ಸಮಯದಲ್ಲಿ ಹಾವಿಗೆ ತೊಂದರೆ ಮಾಡಿದರೆ ತನ್ನ ತಲೆಯನ್ನು ದೇಹದ ಒಳಗಡೆ ಸೇರಿಸಿಕೊಂಡು ಸುತ್ತಿಕೊಂಡು ಬಿಡುತ್ತದೆ, ಅತೀ ಹೆಚ್ಚು ಅದನ್ನು ಪ್ರಚೋದಿಸಿದರೆ ಕಚ್ಚುತ್ತದೆ, ಆದರೆ ರಾತ್ರಿಯಲ್ಲಿ ಯಾವುದೇ ಎಚ್ಚರಿಕೆ ನೀಡದೆ ಕಚ್ಚುತ್ತದೆ
- ನೆಲದ ಮೇಲೆ ಮಲಗಿರುವವರಿಗೆ ಕಚ್ಚುತ್ತದೆ. ಕಚ್ಚುವಿಕೆಯು ನೋವು ರಹಿತವಾಗಿರುತ್ತದೆ. ಕಡಿತಕ್ಕೆ ಒಳಗಾದ ವ್ಯಕ್ತಿ ನಿದ್ರೆಯಲ್ಲೇ ಸಾಯಬಹುದು. ಯಾಕೆಂದರೆ ಅದು ಶಕ್ತಿಯುತ ನರ ವಿಷಕಾರಿಯಾಗಿರುವುದರಿಂದ
- ಹೊಟ್ಟೆ ಸೆಳೆತ, ಮಂದ ದೃಷ್ಟಿ, ಬೆವರುವುದು, ವಾಂತಿ, ಮಾತಿನಲ್ಲಿ ತೊಂದರೆ ಸಾಮಾನ್ಯ ರೋಗಲಕ್ಷಣವು

## ಕೊಳಕು ಮಂಡಲ

ಡಬಾಯ್ಯಾ ರಸೆಲ್ಲಿ
ಹೆಮೋಟಾಕ್ಸಿಕ್ ವಿಷ

ತ್ರಿಕೋನ ತಲೆಯೊಂದಿಗೆ ಒರಟು ಹುರುಪುಗಳಿಂದ ಕೂಡಿದ್ದು ತಲೆಯ ಮೇಲೆ ಒಂದು ಬಾಣ ಅಥವಾ ಶಿಲುಬೆಯಂತಹ ಗುರುತು ಹೊಂದಿರುತ್ತದೆ. ಹಿಂಭಾಗದಲ್ಲಿ, ಹಳದಿ, ಕಂದು ಅಥವಾ ನೆಲದ ಬಣ್ಣವನ್ನು ಹೊಂದಿರುತ್ತದೆ. ಮತ್ತು ದೇಹದ ಉದ್ದಕ್ಕೂ ಮೂರು ಕಂದು ಬಣ್ಣದ ಚುಕ್ಕೆಗಳಿದ್ದೂ ಅದರ ಸುತ್ತಲೂ ಕಪ್ಪುಬಣ್ಣದ ಗೆರೆಯು ಸುತ್ತುವರೆದಿದ್ದು ಅದರ ಹೊರಗಿನ ಭಾಗ ಬಿಳಿ ಅಥವಾ ಹಳದಿ ಭಾಗದಿಂದ ಕೂಡಿರುತ್ತದೆ

ಮೊಟ್ಟೆಯೊಡೆಯುವ ಮರಿಗಳು ಸಂಪೂರ್ಣವಾಗಿ ಕ್ರಿಯಾತ್ಮಕ ವಿಷ ಗ್ರಂಥಿಗಳು ಹೊಂದಿವೆ



- ರಾತ್ರಿ ಸಕ್ರಿಯವಾಗಿರುತ್ತದೆ, ಹವಾಮಾನ ತಂಪಾಗಿದ್ದರೆ ಬೆಳಗ್ಗೆ ಕೂಡ ಸಕ್ರಿಯವಾಗಿರುತ್ತದೆ
- ಹುಲ್ಲಿನ ಮತ್ತು ಕಾಡಿನ ಪ್ರದೇಶ ಹಾಗೂ ಕೃಷಿ ಭೂಮಿಯಲ್ಲಿ ಕಂಡುಬರುತ್ತವೆ
- ನಿಧಾನವಾಗಿ ಅಥವಾ ಜಡತ್ವವಾಗಿ ಕಾಣಿಸಿಗುತ್ತವೆ. ಎಚ್ಚರಿಕೆನೀಡುವುದಕ್ಕೆ ಕುಕ್ಕರ್ ನ ಶಿಳ್ಳೆ ಯಂತೆ ಶಬ್ದ ಮಾಡುತ್ತದೆ
- ಮಿಂಚಿನ ವೇಗದಲ್ಲಿ ಆಕ್ರಮಣಕಾರಿಯಾಗಿ ಕಚ್ಚುತ್ತದೆ
- ಕಡಿತ ತುಂಬಾ ನೋವನ್ನು ಕೊಡುತ್ತದೆ ಮತ್ತು ಗುಳ್ಳೆಗಳಾಗುತ್ತವೆ ಹೀಮೊ ಟಾಕ್ಸಿಕ್ ವಿಷದಿಂದ ಒಸಡುಗಳಲ್ಲಿ ಮತ್ತು ಕಣ್ಣು ಗಳಲ್ಲಿ ರಕ್ತ ಬರುವುದುಂಟು

## ಗರಗಸ ಮಂಡಲ

ಯೇಕೀಸ್ ಕ್ಯಾರಿನಾಟಸ್
ಹೆಮೋಟಾಕ್ಸಿಕ್ ವಿಷ

ತ್ರಿಕೋನಾಕಾರದ ತಲೆಯೊಂದಿಗೆ ಒರಟು ಹುರುಪುಗಳಿಂದ ಕೂಡಿದ್ದು ದೇಹದ ಬಣ್ಣಗಳು ಇಟ್ಟಿಗೆ ಕೆಂಪು ಬಣ್ಣದಿಂದ ಧೂಳಿನ ಕಂದು ಬಣ್ಣದ ವರೆಗೂ ಕಂಡುಬರುತ್ತದೆ ಹಾಗೂ ತಲೆಯ ಮೇಲೆ ಒಂದು ಬಾಣ ಅಥವಾ ಶಿಲುಬೆಯಂತಹ ಗುರುತನ್ನು ಹೊಂದಿರುತ್ತದೆ

- ರಾತ್ರಿಯಲ್ಲಿ ಸಕ್ರಿಯವಾಗಿದ್ದು, ಸಂಧ್ಯಾಕಾಲದಲ್ಲಿ ಬೇಟೆ ಮಾಡುತ್ತದೆ
- ಮರುಭೂಮಿ, ಅರೆ ಮರುಭೂಮಿ, ಪತನಶೀಲ ಕಾಡು, ಹುಲ್ಲುಗಾವಲು, ಕುರುಚಲು ಕಾಡು, ಕಲ್ಲುಗಳ ಸಂದಿಯಲ್ಲಿ ಬದುಕುತ್ತವೆ
- ಅಡ್ಡ ಅಂಕುಡೊಂಕಾದ ಚಲನವಲನದಿಂದ ಕೂಡಿರುತ್ತದೆ. ದೇಹವನ್ನು "S" ಆಕಾರದಲ್ಲಿಟ್ಟು ಕೊಂಡು ಸಂಚರಿಸುತ್ತದೆ
- ಎಚ್ಚರಿಕೆ ಕೊಡುವಾಗ ಗರಗಸದ ಶಬ್ದ ವನ್ನು ಹೊರ ಹೊಮ್ಮಿಸುತ್ತದೆ. ಇದು ತನ್ನ ದೇಹವನ್ನು ನಿರಂತರವಾಗಿ ಉಜ್ಜುವುದರಿಂದ ನಡೆಯುತ್ತದೆ
- ಹಾವಿಗೆ ತೊಂದರೆ ನೀಡಿದರೆ ಯಾವುದೇ ಎಚ್ಚರಿಕೆ ನೀಡದೆ ಆಕ್ರಮಣಕಾರಿಯಾಗಿ ಮತ್ತು ಪದೆ ಪದೇ ಕಚ್ಚುತ್ತದೆ
- ಕಚ್ಚಿದ ಸ್ಥಳದಲ್ಲಿ ಊತ, ನೋವು, ರಕ್ತ ಸೋರುವುದು ಗುಳ್ಳೆಗಳಾಗುವುದು ಸಾಮಾನ್ಯ ಮತ್ತು ಒಸಡು ಹಾಗೂ ಕಣ್ಣುಗಳಲ್ಲಿ ರಕ್ತ ಬರುತ್ತದೆ



ವಿಷಪೂರಿತ ಹಾವು ಕಡಿತದ ಸಂದರ್ಭದಲ್ಲಿ, ವೈದ್ಯಕೀಯ ಆರೈಕೆಯಲ್ಲಿ ಆಂಟಿವೆನಮ್ ಅನ್ನು ಸಮಯೋಚಿತವಾಗಿ ನೀಡುವುದು ಮಾತ್ರ ಚಿಕಿತ್ಸೆಯಾಗಿದೆ

## ನಿಮಗಿದು ಗೊತ್ತೇ?

- ಇಲಿಗಳನ್ನು ನಿಯಂತ್ರಿಸುವ ಮೂಲಕ ಹಾವುಗಳು ಪ್ರಮುಖ ಪರಿಸರ ವ್ಯವಸ್ಥೆಯ ಸೇವೆಗಳನ್ನು ಒದಗಿಸುತ್ತವೆ. ರೋಗಗಳನ್ನು ಉಂಟುಮಾಡುವ ಮತ್ತು ಬೆಳೆ ಹಾನಿ ಮಾಡುವ ಕೀಟಗಳನ್ನು ನಿಯಂತ್ರಿಸುತ್ತವೆ
- ಹಾವುಗಳು ಮನುಷ್ಯರೊಡನೆ ಮುಖಾಮುಖಿಯಾಗುವುದನ್ನು ತಪ್ಪಿಸುತ್ತವೆ ಮತ್ತು ಬೆದರಿಕೆಯೊಡ್ಡಿದಾಗ ಮಾತ್ರ ದಾಳಿ ಮಾಡುತ್ತವೆ ಆಕಸ್ಮಿಕವಾಗಿ ತುಳಿದಾಗ ಮಾತ್ರ ದಾಳಿ ಮಾಡುತ್ತವೆ
- ಸಾಮಾನ್ಯವಾಗಿ ಕೆಲವು ವಿಷಪೂರಿತ ಹಾವು ತನ್ನ ಬಲಿಪಶುವಿಗೆ ವಿಷವನ್ನು ಚುಚ್ಚುಮದ್ದು ಮಾಡದೆ ಕಚ್ಚುತ್ತದೆ, ಇದನ್ನು 'ಒಣ ಕಚ್ಚುವಿಕೆ' ಎಂದು ಕರೆಯಲಾಗುತ್ತದೆ
- ಹಾವು ಜನರನ್ನು ಗುರುತು ಹಿಡಿದು ದ್ವೇಷಕ್ಕಾಗಿ ಹಿಂಬಾಲಿಸಿ ಕಚ್ಚುತ್ತದೆ ಎಂಬುದು ಜನಪ್ರಿಯ ನಂಬಿಕೆ. ಆದರೆ ಹಾವುಗಳಿಗೆ ನೆನಪಿನ ಶಕ್ತಿ ಇರುವುದಿಲ್ಲ ಮತ್ತು ಹಾವುಗಳು ಮನುಷ್ಯರಿಂದ ದೂರವಿರಲು ಬಯಸುತ್ತವೆ
- ಪ್ರತಿ ವರ್ಷ ಭಾರತದಲ್ಲಿ ಹಾವಿನ ಕಡಿತದಿಂದ ಸುಮಾರು 50,000 ಜನರು ಪ್ರಾಣ ಕಳೆದು ಕೊಳ್ಳುತ್ತಿದ್ದಾರೆ
- ಹಾವುಗಳು ಬೇಟೆ ಪ್ರಾಣಿಯನ್ನು ನಿಶ್ಚಲಗೊಳಿಸಲು ಮತ್ತು ಜೀರ್ಣಕ್ರಿಯೆಗಾಗಿ ವಿಷವನ್ನು ಚುಚ್ಚುತ್ತವೆ. ಮತ್ತು ದೊಡ್ಡ ನಾಲ್ಕು ವಿಷಪೂರಿತ ಹಾವುಗಳು ಆಹಾರಕ್ಕಾಗಿ ಸಣ್ಣ ಸಸ್ತನಿ, ಪಕ್ಷಿ, ಸರೀಸೃಪ ಮತ್ತು ಉಭಯಚರಗಳನ್ನು ತಿನ್ನುತ್ತವೆ
- ಹಾವುಗಳು ಬೇಟೆಯನ್ನು ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಗ್ರಹಿಸಲು ತಮ್ಮ ಕವಲೊಡೆದ ನಾಲಿಗೆಯನ್ನು ಬಳಸುತ್ತವೆ; ವಿಶೇಷವಾಗಿ ಅದರ ಬೇಟೆಯನ್ನು ಪತ್ತೆಹಚ್ಚಲು
- ಅರಿವಿನ ಕೊರತೆ ಮತ್ತು ಭಯದ ಪರಿಣಾಮವಾಗಿ ವಿಷರಹಿತ ಹಾವುಗಳು ಸೇರಿದಂತೆ ಎಲ್ಲಾ ಹಾವುಗಳನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲಲಾಗುತ್ತಿದೆ
- ಕಾಡುಗಳ ನಾಶ, ರಸ್ತೆಯ ಅಪಘಾತಗಳಿಂದ, ಚರ್ಮ ಮತ್ತು ಮಾಂಸಕ್ಕಾಗಿ ಬೇಟೆಯಾಡುವುದರಿಂದ ಹಾವುಗಳ ಸಂತತಿ ಕಮ್ಮಿ ಆಗುತ್ತಿದೆ
- ಭಯದಿಂದ ಹಾವುಗಳನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲುವುದು ಸಹ ಒಂದು ದೊಡ್ಡ ಕಾರಣವಾಗಿದೆ


ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು